ಜನ್ನತ್ ಅವಳ ಮುಖವನ್ನೇ ದಿಟ್ಟಿಸುತ್ತ ಕುಳಿತಿದ್ದ. 'ಏನು ಮುಖ ನೋಡುವುದು... ಮದ್ವೆ ಆಗಿದ್ಯಾ?' ಅವಳಿಂದ ಅಚಾನಕ್ಕಾಗಿ ಈಟಿಯಂತೆ ಬಂದ ಪ್ರಶ್ನೆಗೆ ತಬ್ಬಿಬ್ಬಾಗಿ ಜನ್ನತ್ 'ಇ... ಇಲ್ಲ' ಎಂದು ತಡವರಿಸಿದ. ಅದಾಗಲೇ ಅವಳ ಸಿಗರೇಟು ಮುಕ್ಕಾಲು ಭಾಗ ಮುಗಿದು ಹೋಗಿತ್ತು.

'ಈ ಚುತ್ತುಕೊರಡಿ ಅಂದರೆ ಗೊತ್ತಲ್ವಾ ನಿನಗೆ, ಲೂಸ್ ಅಂತಾರಲ್ವಾ ಅದೇ... ಈ ಮಕ್ಕಳ ಬಾಯಿಗೂ ದೊಡ್ಡವರು ಹೇಗೆ ದಾಟಿಸಿದ್ದಾರೆ ನೋಡು. ಒಂದು ಕಾಲದಲ್ಲಿ ಈ ಊರಿನ ದೊಡ್ಡವರಲ್ಲಿ ನನ್ನ ಜೊತೆ ಮಲಗಲು ಬಾರದವರು ಯಾರಿದ್ದರು ಹೇಳು. ನನಗೂ ಜೊತೆಗಾರನೊಬ್ಬನ ಅವಶ್ಯಕತೆ ಇತ್ತು. ಅದು ಬೇರೆ ವಿಚಾರ. ಆದರೂ ಈ ಊರಲ್ಲಿ ಗಂಡಸೆಂದು ಕರೆಯಲ್ಪಡುವವನು ಯಾರಿದ್ದಾನೆ.. ಹಹ್ಹ... ಹಹ್ಹ... ಎಲ್ಲರೂ ಕೈಲಾಗದವರು. ಇವರೆಲ್ಲಾ ನಾನು ಇವರ ಅಂಕೆಗೆ ಸಿಗದಿರುವುದಕ್ಕೆ ಕೊಟ್ಟ ಬಿರುದು ಅಷ್ಟೆ. ಈ ನರಜನ್ಮವೇ ಇಷ್ಟು. ಸಾಯಲಿ, ನೋಡು. ನಾನು ನನ್ನ ಮಗನನ್ನು ಮಾರದಿದ್ದರೆ ಈ ಹೊತ್ತಿಗೆ ನನಗೂ ನಿನ್ನಷ್ಟೇ ದೊಡ್ಡ ಮಗನಿರುತ್ತಿದ್ದ. ಆ ಮಗನಿಗೊಂದು ಮದುವೆಯಾಗಿ ನನಗೊಬ್ಬು ಸೊಸೆ ಇರ್ತಿದ್ಳು. ಬದುಕೆಷ್ಟು ಸುಂದರವಾಗಿರ್ತಿತ್ತು ಅಲ್ಲವಾ' ಅವಳು ಅವಳ ಬದುಕಿನ ಕಥೆಯ ಎಳೆಯೊಂದನ್ನು ಹೇಳಿಕೊಂಡು ಸಿಗರೇಟಿನ ನಶೆಯಲ್ಲಿ ತೇಲಾಡುತ್ತಿದ್ದಳು. ಜನ್ನತ್‌ಗೆ ಗೆಳೆಯ ಹೇಳಿದ ಮಾತು ನಿಜ ಅನಿಸತೊಡಗಿದ್ದು ಆಗಲೇ.

ತಲೆಗೆ ಹಾಸಿದ್ದ ಕಪ್ಪು ಬುರ್ಖಾದ ಶಾಲಿನ ಮೇಲಿಂದಲೇ ಕೆರೆದುಕೊಳ್ಳುತ್ತಾ 'ನೋಡಪ್ಪಾ... ನನಗೂ ಒಬ್ಬ ಗಂಡ ಅಂತ ಇದ್ದ. ಮಗ ಹುಟ್ಟಿದ ಕೂಡಲೇ ಬಿಟ್ಟುಹೋದ. ಎಲ್ಲಿಗೆಂಥ ಯಾರಿಗೆ ಗೊತ್ತು. ನನಗೂ ಬದುಕಿನ ಬವಣೆ ಅಂಥದ್ದೊಂದಿರುತ್ತೆ. ತಲೆಬಿಸಿ ಹೆಚ್ಚಾದಾಗ ಪ್ರಾರಂಭಿಸಿದ ಚಟವಿದು, ಬೀಡಿ. ಇಷ್ಟುದಿನವೂ ನನ್ನ ಸಂಗಾತಿಯಾಗಿ ಉಳಿದಿರುವುದು ಇದೊಂದೇ. ಹೆಂಗಸರು ಬೀಡಿ ಎಳೆಯುವುದು ತಪ್ಪಂತೆ. ಹೇಳುವ ಮನುಷ್ಯರೇ ಸರಿ ಇಲ್ಲದಿರುವಾಗ ನಮಗಂಟಿದ ಚಟವೂ ಬಿಡುವುದುಂಟೇ. ಈ ಊರ ಯಾವ ಯಾವ ಬ್ಯಾವರ್ಸಿಗಳು ಹೇಗೆ ಅಂತ ನನಗೆ ಗೊತ್ತು. ಅದನ್ನೆಲ್ಲಾ ಹೇಳಲು ಹೊರಟರೆ ಆಗಲಿಕ್ಕಿಲ್ಲ ನೋಡು... ಆದರೂ ಒಂದು ಮಾತು ಮಗಾ... ನೀನು ಬೀಡಿ ಎಳಿಬೇಡ, ಕೆಮ್ಮು ಒಮ್ಮೊಮ್ಮೆ ಪ್ರಾರಂಭ ಆದರೆ ನಿಲ್ಲಿಸೋದೆ ಕಷ್ಟ' ಅಷ್ಟೊತ್ತಿಗೆ ಅವಳ ಸಿಗರೇಟು ಉರಿದು ಮುಗಿದಿತ್ತು. ಅವಳು ಬರುತ್ತೇನೆಂದು ಕೂಡಾ ಹೇಳದೆ ತಿರುಗಿ ಕತ್ತಲ ಕಡಲಿನ ತಡಿಯಲ್ಲಿ ನಡೆಯುತ್ತಾ ಮರೆಯಾದಳು.

ಯಾರಿರಬಹುದು ಅವಳು. ಒಂದು ಕಾಲದ ಊರ ಸೂಳೆಯಾಗಿದ್ದವಳಿರಬೇಕು. ಮಗುವನ್ನು ಮಾರಿದ್ದಳಂತೆ. ನಾನು ನಮ್ಮಮ್ಮನಿಗೆ ಒಬ್ಬನೇ ಮಗ. ನಾನೂ ಆಗಿರಲೂಬಹುದು. ಛೇ ಛೇ... ಇಲ್ಲಪ್ಪ... ನಾನು ಸೂಳೆಯ ಮಗನಾಗಿರಲಿಕ್ಕಿಲ್ಲ- ಅವನು ಕಡಲ ಮೊರೆತವನ್ನು ಧೇನಿಸುತ್ತಾ ಅವಳು ಕರಗಿ ಹೋದ ದಾರಿ ನೋಡುತ್ತಾ ಚಿಂತಿಸತೊಡಗಿದ. ಅಷ್ಟರಲ್ಲೇ ಮತ್ತೆ ಫೋನ್ ಬಂತು. ಜನ್ನತ್ ಫೋನ್ ಕೈಗೆತ್ತಿಕೊಂಡ. 'ಹಲೋ... ಫೋನಾದ್ರೂ ತಗೀಬಾರ್ದ ಹಡಬೆ. ಕಥೆ ಏನಾಯ್ತೋ? ನಿನ್ನನ್ನೆಲ್ಲಾ ನಂಬಿಕೊಂಡು ಅಡ್ವಾನ್ಸ್ ಬೇರೆ ಕೊಟ್ಟಿದ್ದೇನೆ. ಎಷ್ಟು ದಿನ ಆಯ್ತು... ಎಷ್ಟೊಂತ ಕಾಲ್ ಮಾಡೋದು. ಈ ವಾರದ ಕೊನೆಗೆ ಕಥೆ ಸಿಗ್ಲೇ ಬೇಕು?'

'ಸರ್ ಎರಡು ವಾರದಿಂದ ಕಥೆನೇ ಹುಟ್ತಿಲ್ಲ ಸರ್. ಸೋ, ಏನಾದರೂ ಹೊಳೀತದಾಂತ ಕಡಲಬದಿಗೆ ಬಂದಿದ್ದೆ'

'ನಿನ್ನ ಕಾರಣಗಳೆಲ್ಲಾ ನನ್ಗೆ ಬೇಕಿಲ್ಲ. ಅದಕ್ಕೀಗ ಟೈಮೂ ಇಲ್ಲ. ಕಥೆ ಬೇಕು ಅಷ್ಟೇ. ವಾರದ ಕೊನೆಗೆ ಕಥೆ ಕಳುಹಿಸ್ಕೊಡು. ಇನ್ನು ಅಡ್ವಾನ್ಸೆಲ್ಲಾ ಕೊಡಲ್ಲ ನಿನ್ಗೆ'

'ಸರಿ ಸರ್, ಖಂಡಿತಾ ಬರೀತಿನಿ ಸರ್...' ಫೋನ್ ಡಿಸ್‌ಕನೆಕ್ಟಾಯಿತು.

ಅವನು ಕಡಲಬದಿಯಿಂದ ಎದ್ದು ನಡೆಯುತ್ತಾ ಬಂದ. ಅಲೆಗಳಿಗೆ ಬೆನ್ನು ಹಾಕಿ ನಡೆಯುತ್ತಾ ಕಥೆಯ ಎಳೆಯನ್ನು ಚಿಂತಿಸುತ್ತಾ ರಸ್ತೆ ತಲುಪಿದ. ಹೌದು, ಅವಳೇ ನನ್ನ ಮುಂದಿನ ಕಥೆಯ ಮುಖ್ಯಪಾತ್ರ. ಸಿಗರೇಟು ಪೊಟ್ಟಣದಿಂದ ಒಂದು ಸಿಗರೇಟನ್ನು ತೆಗೆದು ತುಟಿಗಿರಿಸಿದ. ಸಿಗರ್ ಲೈಟಿನ ಬೆಂಕಿ ಅದನ್ನು ಮುತ್ತಿಕೊಂಡಂತೆ ಹೊಗೆ ಮೇಲೇಳತೊಡಗಿತು. ಕಟುವಾದ ಹೊಗೆ ಶ್ವಾಸಕೋಶವನ್ನು ಸೇರಿಕೊಳ್ಳುವಾಗ ಕೆಮ್ಮು ಬರತೊಡಗಿತು. ಜೋರಾಗಿ ಕೆಮ್ಮಿಕೊಂಡ. ಸುಧಾರಿಸಿಕೊಂಡು ಹೊಗೆ ಸರಾಗವಾಗಿ ಬಾಯಿಯಿಂದ